ಶ್ರಿ ಜೆ.ಸಿ. ಮಾಧುಸ್ವಾಮಿ :- ಶಾಸನ ಸಭೆಯಲ್ಲಿ ಒಂದಕ್ಕೂ ಈಲ್ಡ್ ಆಗುವುದಿಲ್ಲ ಎಂದು ತಾವು ತೀರ್ಮಾನ ತೆಗೆದುಕೊಂಡು ಬಂದಿರುವಂತೆ ಕಾಣುತ್ತದೆ.

ಶ್ರೀ ಸಿದ್ಧರಾಮಯ್ಯ :- ಬಿಲ್ಲುಗಳು ಬಾಕಿ ಉಳಿದಿವೆ ಎಂದಿದ್ದರಲ್ಲ, ಕೆಲವು ಏನಾಗಿದೆ ಎಂದರೆ ಬಜೆಟ್‌ನಲ್ಲಿ ಎಷ್ಟು ಇದೆ ಅದಕ್ಕಿಂತ ಹೆಚ್ಚು ಕೆಲಸ ಮಾಡಿರುತ್ತಾರೆ. ಬಜೆಟ್‌ನಲ್ಲಿ ಗ್ರ್ಯಾಂಟ್ಸ್ ಇರುತ್ತದೆ. ಆ ಗ್ರ್ಯಾಂಟ್‌ನ್ನು ಮೀರಿ ಕೆಲಸ ಮಾಡಿರುತ್ತಾರೆ. ಅದು ಸಣ್ಣ ನೀರಾವರಿಯಲ್ಲಿ ಆ ರೀತಿ ಆಗಿದೆ. ಪಿಡಬ್ಲ್ಯೂನಲ್ಲಿ ಕೆಲವು ಕಡೆ ಹೀಗೆ ಆಗಿದೆ. ಆದ್ದರಿಂದ, ಒಟ್ಟಿಗೆ ಈ ತಿಂಗಳಿನಲ್ಲಿ ಎಷ್ಟು ಎಲ್ ಒಸಿ ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುತ್ತಿದ್ದೇವೆ. ಬಸವರಾಜ್‌ರವರು ಎತ್ತಿರತಕ್ಕಂಥದ್ದು ಸಮುದ್ರ ಕೊರತೆಯ ಬಗ್ಗೆ ಅದನ್ನು ಕೂಡ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈ 30ನೇ ತಾರೀಖಿನ ಒಳಗೆ ಇರಿಗೇಷನ್ ಬಿಲ್ಲುಗಳು, ಪಿಡಬ್ಲ್ಯೂಡಿ ಬಿಲ್ಲುಗಳು ಅವೆಲ್ಲವನ್ನು ಕೊಡತಕ್ಕಂಥದ್ದನ್ನು ಮಾಡುತ್ತಾ ಇದ್ದೇವೆ. ಚುನಾವಣೆ ಬಂತು, ಬಿಲ್ಲುಗಳು ಬಾಕಿ ಉಳಿಯಿತು, ಎಲ್ಲಾ ಸರ್ಕಾರಗಳಲ್ಲೂ ಮಾರ್ಚಿ ತಿಂಗಳಲ್ಲಿ ಬಾಕಿ ಬಿಲ್ಲುಗಳು ಇರುತ್ತವೆ. ತೀರಿಸುವುದಕ್ಕೆ ಸಾಧ್ಯವಾಗದಷ್ಟು ಬಿಲ್ಲುಗಳೇನಿಲ್ಲ. ಅಷ್ಟು ದುಡ್ಡನ್ನು ಈ ತಿಂಗಳಲ್ಲಿ ಕೊಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಂತಹ ಯಾವುದೇ ಸಲಹೆ ಒಕ್ಕೊರಲಿನಿಂದ 13 ಜನ ಇಲ್ಲಿ ಮಾತನಾಡಿದವರು, ಗೋಧಿಯ ತೆರಿಗೆಯನ್ನು ಕಡಿಮೆ ಮಾಡಿ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದ್ದೆವು. ಆ ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಎಂದು ಹಾಕಿ 110 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಾ ಇದ್ದಾರೆ. ಏನು ಸಂಬಂಧವಿಲ್ಲದಿರುವಂತಹ ಸಾಮಾನ್ಯ ಜನಗಳು ಅದನ್ನು ಕಟ್ಟಬೇಕು. ಈಗ ಬಿಲ್ಲುಗಳು ಬಾಕಿ ಇದ್ದಾವೆ, ಯಾವುದಕ್ಕಾದರೂ ಆದ್ಯತೆ ಕೊಡಿ ಎಂದು ಹೇಳಿದರೆ ಯಾವುದೇ ಸಲಹೆಯನ್ನು ಕೇಳುವುದಕ್ಕೆ ಈ ಸರ್ಕಾರ ರೆಡಿ ಇಲ್ಲ. ಆದ್ದರಿಂದ ಅವರು ಒಂದೇ ದಿಕ್ಕಿನಲ್ಲಿ ಅವರು ಹೇಳಿದ ಹಾಗೆ ನಡೆಯಬೇಕು ಪ್ರತಿಪಕ್ಷದ ಯಾವುದೇ ಸಲಹೆಗೆ ಅವರು ಸ್ಪಂದಿಸುವುದಕ್ಕೆ ರೆಡಿ ಇಲ್ಲ. ಈ ಒಂದು ಧೋರಣೆಯನ್ನು ಪ್ರತಿಭಟಿಸಿ ಬಹುಶ: ಈ ಸಂದರ್ಭದಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ, ನಾವು ವಾಕ್ ಔಟ್ ಮಾಡಿ ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರ ನಾಯಕತ್ವದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸದನದಿಂದ ಹೊರನಡೆದರು)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈ ಸರ್ಮಾಧಿಕಾರಿ ಧೋರಣೆ ಸರಿಯಲ್ಲ. ಶಾಸನಸಭೆಯಲ್ಲಿ ಚರ್ಚೆಯಾಗಿದ್ದರಲ್ಲಿ ಒಂದೇ ಒಂದು ಐಟಂ ಬಗ್ಗೆ ಈಲ್ಡ್ ಆಗುವುದಿಲ್ಲ ಎಂಬ ಮಟ್ಟಕ್ಕೆ ಹೋದ್ರೆ ಬಜೆಟ್ ಚರ್ಚೆ ಏಕೆ ಮಾಡಬೇಕು. ನಾವು ಹೇಳಿದ್ದೆ ಸರ್ವಸ್ವ ಎಂಬ ಭಾವನೆ ಇಟ್ಟುಕೊಂಡು ಇಲ್ಲಿ ಚರ್ಚೆಗಳಿಗೆ ಬರಬಾರದು.

ಅಧ್ಯಕ್ಷರು :- ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ, ''ದಿನಾಂಕ 31.3.99 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 62ರವರೆಗಿನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಮಂಜೂರು ಮಾಡುವುದು.